ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 09-01-1996.

# *ಬಾಲಕರಿಂದ ಮಾಲಿಕರು ಎಂಬ ನಶೆಯಲ್ಲಿರಲು ಮನಸ್ಸಿನ ರಾಜರಾಗಿರಿ.*

(बालक सो मालिकपन के नशे में रहने के लिए मन का राजा बनो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ವಿಶ್ವದ ಮಾಲಿಕನಾದ ತಂದೆಯು ತನ್ನ ನಾಲ್ಕೂ ಕಡೆಯ ಮಾಲಿಕರಿಂದ ಬಾಲಕರಾಗಿರುವ ಮಕ್ಕಳನ್ನು ನೋಡುತ್ತಾ ಇದ್ದಾರೆ. ಬಾಲಕರೂ ಆಗಿದ್ದೀರಿ ಮಾಲಿಕರೂ ಆಗಿದ್ದೀರಿ. ವಿಶ್ವದ ಮಾಲಿಕರಂತೂ ಭವಿಷ್ಯದಲ್ಲಿ ಆಗುವಿರಿ. ಆದರೆ ತಂದೆಯ ಸರ್ವ ಖಜಾನೆಗಳ ಮಾಲಿಕರು ಈಗಲೇ ಆಗಿದ್ದೀರಿ ವಿಶ್ವರಾಜ್ಯಾಧಿಕಾರಿಯೇನೋ ಭವಿಷ್ಯದಲ್ಲಿ ಆಗುವಿರಿ. ಆದರೆ ಈಗ ಸ್ವರಾಜ್ಯಾಧಿಕಾರಿ ಆಗಿದ್ದೀರಿ. ಆದ್ದರಿಂದ ಬಾಲಕರೂ ಆಗಿದ್ದೀರಿ ಹಾಗೂ ಮಾಲಿಕರೂ ಆಗಿದ್ದೀರಿ. ಇಬ್ಬರೂ ಆಗಿದ್ದೀರಲ್ಲವೇ. ಬಾಲಕತನದ ನಶೆಯು ಸದಾ ಇದ್ದೇ ಇರುತ್ತದೆ ಬಾಪ್‌ದಾದಾರವರು ಏನು ನೋಡಿದರೆಂದರೆ ಬಾಲಕತನದ ನಶೆಯು ಪ್ರತ್ಯಕ್ಷ ಅಥವಾ ಗುಪ್ತ ರೂಪದಲ್ಲಿ ಅಧಿಕ ಮಕ್ಕಳಲ್ಲಿ ಇದೆ. ಏಕೆಂದರೆ ಒಂದುವೇಳೆ ಸ್ಮೃತಿಯಲ್ಲಿ ಕುಳಿತುಕೊಂಡರೂ ಸಹ ಏನು ನೆನಪಿರುತ್ತದೆ? ಬಾಬಾ ಎಂದು. ಮಕ್ಕಳಾದಾಗಲೇ ಬಾಬಾ ಎಂದು ಯೋಚನೆಯನ್ನೂ

ಮಾಡುತ್ತೀರಿ ಅಥವಾ ಹೇಳುತ್ತೀರಿ ಕೂಡ. ಹಾಗೂ ಯಾರು ಸತ್ಯವಾದ ಸೇವಾಧಾರಿಯಾಗಿದ್ದಾರೋ ಅವರ ಬಾಯಿಂದ ಪದೇ ಪದೇ ಏನು ಹೊರಬರುತ್ತದೆ? ಬಾಬಾರವರು ಹೀಗೆ ಹೇಳಿದರು. ಬಾಬಾರವರು ಇದನ್ನು ಹೇಳುತ್ತಾರೆ ಎಂದು ಇಡೀ ದಿನದಲ್ಲಿ ಪರಿಶೀಲನೆ ಮಾಡಿದರೆ ಎಷ್ಟು ಸಲ ಬಾಬಾ, ಬಾಬಾ ಎನ್ನುವ ಶಬ್ದವನ್ನು ಸೇವೆ ಮಾಡುವಾಗ ಹೇಳುತ್ತಿರುತ್ತೀರಿ? ಆದರೆ ಎರಡು ಪ್ರಕಾರದವರು ಮನಸ್ಸಿನಿಂದ ಬಾಬಾ ಎಂದು ನುಡಿಯುತ್ತಾರೆ. ಹಾಗೂ ಇನ್ನೊಂದು ಪ್ರಕಾರದವರು ಜ್ಞಾನವಿರುವ ಕಾರಣ ಬುದ್ಧಿಯಿಂದ ಹೇಳುವವರಾಗಿದ್ದಾರೆ. ಯಾರು ಅಂತಃಕರಣದಿಂದ ಬಾಬಾ ಎಂದು ಹೇಳುತ್ತಾರೋ ಅವರಿಗೆ ಸಹಜವಾಗಿ ಮನಸ್ಸಿನಲ್ಲಿ ತಂದೆಯ ಮೂಲಕ ಪ್ರತ್ಯಕ್ಷ ಪ್ರಾಪ್ತಿಯಾಗಿ ಖುಷಿ ಹಾಗೂ ಶಕ್ತಿಯು ದೊರೆಯುತ್ತದೆ. ಹಾಗೂ ಯಾರು ಜ್ಞಾನದ ಅನುಸಾರವಾಗಿ ಕೇವಲ ಬುದ್ದಿಯು ಉತ್ತಮವಾಗಿರುವ ಕಾರಣ ಜ್ಞಾನದಲ್ಲಿ ಬಾಬಾ ಬಾಬಾ ಎನ್ನುವ ಶಬ್ದವನ್ನು ಉಚ್ಚರಿಸುತ್ತಾರೆಯೋ ಅವರಿಗೆ ಆ ಸಮಯಕ್ಕೆ ಹೇಳುವುದರಲ್ಲಿ ಸ್ವಯಂಗೂ ಖುಷಿಯಾಗುತ್ತದೆ ಹಾಗೂ ಕೇಳುವವರಿಗೂ ಸಹ ಆ ಸಮಯಕ್ಕೆ ಖುಷಿಯಾಗುತ್ತದೆ, ಹಿತವೆನಿಸುತ್ತದೆ. ಆದರೆ ಸದಾಕಾಲದವರೆಗೆ ಮನಸ್ಸಿನಲ್ಲಿ ಖುಷಿ ಹಾಗೂ ಶಕ್ತಿ ಎರಡೂ ಇರುವುದಿಲ್ಲ ಒಮ್ಮೊಮ್ಮೆ ಇರುವುದಿಲ್ಲ. ಏಕೆ? ಹೃದಯದಿಂದ ಬಾಬಾ ಎಂದು ನುಡಿಯಲಿಲ್ಲ. ಹೀಗೆ ಬಾಪ್‌ದಾದಾರವರು ಬಾಲಕತನದ ನಿಶ್ಚಯವು ಎಲ್ಲರಿಗೂ ಇರುವುದನ್ನು ನೋಡಿದೆವು. ನಶೆಯು ಒಮ್ಮೊಮ್ಮೆ ಇದೆ. ಒಮ್ಮೊಮ್ಮೆ ಇಲ್ಲ. ನಾನು ತಂದೆಯ ಸಂತಾನ ಆಗಿದ್ದೇನೆ ಎನ್ನುವ ನಿಶ್ಚಯದಲ್ಲಿ ಮೆಜಾರಿಟಿ ಮಕ್ಕಳು ಸಯಾಗಿದ್ದಾರೆ. ಬಾಲಕರಂತೂ ಆಗಿಯೇ ಇದ್ದೀರಿ. ಆದರೆ ನೀವು ಕೇವಲ ಬಾಲಕರಷ್ಟೇ ಅಲ್ಲ, ಬಾಲಕರಿಂದ ಮಾಲೀಕರಗಿದ್ದೀರಿ. ಡಬಲ್ ಆಗಿದ್ದೀರಿ.

ಮಾಲಿಕತನದಲ್ಲಿ 1. ಸ್ವರಾಜ್ಯಾಧಿಕಾರೀ ಮಾಲಿಕರು ಹಾಗೂ 2. ಎರಡನೆಯದಾಗಿ ತಂದೆಯ ಸರ್ವ ಖಜಾನೆಗಳನ್ನೂ ನಿಮ್ಮ ಸ್ವಂತ ಮಾಡಿಕೊಂಡಿದ್ದೀರಿ, ನಿಮ್ಮದೇ ವಾರಸತ್ವ(ಆಸ್ತಿ)ವಾಗಿದೆ. ದಾತಾ ಅಂತೂ ತಂದೆಯಾಗಿದ್ದಾರೆ. ಆದರೆ ತಂದೆಯು ಕೊಟ್ಟರೋ ಅಥವಾ ನೀವು ಮಾಲಿಕರಾಗಿದ್ದೀರೋ, ಎಲ್ಲರಿಗೂ ವಾರಸತ್ವವು ಸಿಕ್ಕಿದೆಯೇ? ಕೆಲವರಿಗೆ ಕಡಿಮೆ, ಕೆಲವರಿಗೆ ಜಾಸ್ತಿ ಸಿಕ್ಕಿಲ್ಲ ತಾನೇ? ಎಲ್ಲರಿಗೂ ಒಂದೇ ಸಮನಾಗಿ ಸಿಕ್ಕಿದೆಯಲ್ಲವೇ? ಅಥವಾ ಕೆಲವರಿಗೆ ಒಂದು ಕೋಟಿ ಸಿಕ್ಕಿದೆ ಹಾಗೂ ಇನ್ನೂ ಕೆಲವರಿಗೆ 10 ಕೋಟಿ ಸಿಕ್ಕಿದೆಯೋ? ಹಾಗೇನೂ ವ್ಯತ್ಯಾಸವಾಗಿಲ್ಲ ತಾನೇ. ಏಕೆಂದರೆ ತಂದೆಯ ಖಜಾನೆಯು ಬೇಹದ್ದಿನದಾಗಿದೆ (ಅಪರಿಮಿತವಾಗಿದೆ). ಎಷ್ಟು ಮಕ್ಕಳಿಗೆ ಹಂಚಿದರೂ ತಂದೆಯ ಖಜಾನೆಯು ಕಡಿಮೆಯಾಗುವುದಿಲ್ಲ. ತೆರೆದ ಭಂಡಾರವಾಗಿದೆ ಹಾಗೂ ಸಂಪನ್ನ ಭಂಡಾರವಾಗಿದೆ. ಆದ್ದರಿಂದ ತಂದೆಯು ಯಾರಿಗಾದರೂ ಕಡಿಮೆ ಏಕೆ ಕೊಡುತ್ತಾರೆ? ಖಜಾನೆಯು ಮಕ್ಕಳ ಸಲುವಾಗಿಯೇ ಇದೆಯೆಂದಾಗ ಒಬ್ಬರಿಗೆ ಹೆಚ್ಚು, ಇನ್ನೊಬ್ಬರಿಗೆ ಕಡಿಮೆ ಏಕೆ ಕೊಡುತ್ತಾರೆ? ಹೀಗೆ ಒಬ್ಬ ತಂದೆಯ ಆಸ್ತಿಗೆ ಅಧಿಕಾರೀ ಮಾಲಿಕರು ಹಾಗೂ ಇನ್ನೊಂದು ಸ್ವರಾಜ್ಯದ ಮಾಲಿಕರಾಗಿದ್ದೀರಿ. ಹಾಗಾದರೆ ಸ್ವರಾಜ್ಯವು ಸಿಕ್ಕಿದೆಯೇ? ಹೀಗೆ ಎರಡರ ಮಾಲಿಕರಾಗಿದ್ದೀರಾ? ಮಾಲಿಕರಾಗಿದ್ದೀರಲ್ಲವೇ? ಪಕ್ಕಾ ಮಾಲಿಕರಾಗಿದ್ದೀರಲ್ಲವೇ? ಆದ್ದರಿಂದ ಬಾಪ್‌ದಾದಾರವರು ಏನು ನೋಡಿದರೆಂದರೆ ಮಾಲಿಕತನದಲ್ಲಿ ಎಷ್ಟು ಸಮಯ ಇರುತ್ತೀರಿ? ಮಾಲಿಕರಾಗಿ ಎಷ್ಟು ಸಮಯ ನಡೆಯುತ್ತೀರಿ? ಹೇಳುವುದೇನೋ ಸ್ವರಾಜ್ಯವು ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ ಎಂದು ಹೇಳುತ್ತೀರಿ. ಹೀಗೆ ಹೇಳುತ್ತೀರಲ್ಲವೇ? ಅಥವಾ ಮಹಾರಥಿಗಳ

ಜನ್ಮಸಿದ್ಧ ಅಧಿಕಾರವಾಗಿದೆ ನಮ್ಮದಲ್ಲ ಎಂದು ಹೇಳುತ್ತೀರೋ. ಪೂರ್ತಿ ನಿಮ್ಮದಾಗಿದೆಯೇ? ಮಾತೆಯರದೂ ಪೂರ್ತಿ ಅಧಿಕಾರವಿದೆಯೇ? ಪಾಂಡವರಿಗೆ ಪೂರ್ತಿ ರಾಜ್ಯಾಧಿಕಾರವು ಸಿಕ್ಕಿದೆಯೇ? ಅಥವಾ ಅಲ್ಪಸ್ವಲ್ಪ ಸಿಕ್ಕಿದೆಯೋ? ಇದರಲ್ಲಿ ಪಕ್ಕಾ ಆಗಿ ಇರಿ. ಪೂರ್ತಿ ಪಕ್ಕಾ ಆಗಿರಿ. ಸ್ವರಾಜ್ಯಾಧಿಕಾರಿ ಮಕ್ಕಳ ಕರ್ಮಚಾರಿ ಆಗಿರುವ ಸರ್ವ ಕರ್ಮೇಂದ್ರಿಯಗಳೂ ಕರ್ಮಚಾರಿಯಾಗಿವೆಯಲ್ಲವೇ? ಮಾಲಿಕರಂತೂ ಆಗಿಲ್ಲ ತಾನೇ? ನೀವು ಮಾಲಿಕರಾಗಿದ್ದೀರಿ ಅಲ್ಲವೇ. ಇದು ಸರಿಯಾಗಿದೆಯಲ್ಲವೇ? ಅಥವಾ ಕರ್ಮಚಾರಿಗಳು ಮಾಲೀಕರಾಗಿ ನೀವು ಕರ್ಮಚಾರಿ ಆಗುತ್ತಿದ್ದೀರಾ?

ಬಾಪ್‌ದಾದಾರವರು ಏನು ನೋಡಿದರು- ಮಕ್ಕಳ ಸ್ಥಿತಿಯಲ್ಲಿ ಮಾಲಿಕತನವನ್ನು ಎಲ್ಲಕ್ಕಿಂತಲೂ ಹೆಚ್ಚು ಮರೆಸುವುದು ಮತ್ತು ಸಮಯದನುಸಾರ ರಾಜನನ್ನು ವಶ ಮಾಡಿಕೊಳ್ಳುವುದು- ಮನಸ್ಸು. ಆದ್ದರಿಂದ ತಂದೆಯ ಮಂತ್ರವೂ ಸಹ ಮನ್ಮನಾಭವ ಆಗಿದೆ ತನ್ಮನಾಭವ, ಧನ್ಮನಾಭವ ಅಥವಾ ಬುದ್ಧಿ ಮನಾಭವ ಎನ್ನುವ ಮಂತ್ರವನ್ನು ತಂದೆಯು ಹೇಳಿಲ್ಲ. ಮನ್ಮನಾಭವ ಆಗಿದೆ. ಹೀಗೆ ಮನಸ್ಸು ತನ್ನ ಪ್ರಭಾವವನ್ನು ಬೀರುತ್ತದೆ. ಮನಸ್ಸಿನ ವಶದಲ್ಲಿ ಬಂದು ಬಿಡುತ್ತಾರೆ. ನೋಡಿರಿ ಯಾವುದಾದರೂ ಅತಿ ಸಣ್ಣ ವ್ಯರ್ಥ ವಿಷಯ, ವ್ಯರ್ಥ ವಾತಾವರಣ, ವ್ಯರ್ಥ ದೃಶ್ಯ ಎಲ್ಲದರ ಪ್ರಭಾವವು ಮೊದಲು ಯಾವುದರ ಮೇಲೆ ಬೀಳುತ್ತದೆ? ಮನಸ್ಸಿನ ಮೇಲೆ ಬೀಳುತ್ತದೆ ಅಲ್ಲವೇ. ಆನಂತರ ಬುದ್ಧಿಯು ಅದಕ್ಕೆ ಸಹಯೋಗ ಕೊಡುತ್ತದೆ ಹಾಗೂ ಮನಸ್ಸು ಮತ್ತು ಬುದ್ಧಿಯು ಒಂದುವೇಳೆ ಅದೇ ಪ್ರಕಾರ ನಡೆಯುತ್ತಿದ್ದರೆ ಸಂಸ್ಕಾರವಾಗಿ ಬಿಡುತ್ತದೆ. ಈಗಲೂ ಸಹ ನಿಮ್ಮನ್ನು ಪರಿಶೀಲನೆ ಮಾಡಿಕೊಳ್ಳಿರಿ. ನನ್ನ ವ್ಯರ್ಥ ಸಂಸ್ಕಾರವೇನಿದೆಯೋ ಅದು ಹೇಗೆ ರೂಪುಗೊಂಡಿತು? ಯಾರದಾದರೂ ಸಂಸ್ಕಾರವು ಸಣ್ಣಪುಟ್ಟ ವಿಷಯದಿಂದ ಒಂದು ಕ್ಷಣದಲ್ಲಿ ಮನಸ್ಸಿನಲ್ಲಿ ಫೀಲಿಂಗ್ ತರುವಂತೆ ತಯಾರಾದರೆ ಅದು ಹೇಗೆ ತಯಾರಾಯಿತು? ಆಮೇಲೆ ನಾನೇನೂ ಬಯಸುವುದಿಲ್ಲ, ವಿಚಾರವನ್ನೂ ಮಾಡುತ್ತೇನೆ, ಆದರೂ ಆಗಿ ಬಿಡುತ್ತದೆ ಎಂದು ಹೇಳುತ್ತಾರೆ. ಅವರನ್ನು ಸಂಸ್ಕಾರಕ್ಕೆ ವಶರಾಗುವವರೆಂದು ಹೇಳಲಾಗುತ್ತದೆ. ಒಬ್ಬೊಬರ ಮನಸ್ಸು ಸ್ವಲ್ಪ ಸಮಯದಲ್ಲಿಯೇ ಬೇಸರಗೊಳ್ಳುತ್ತದೆ. ಸ್ವಲ್ಪ ಏನಾದರೂ ನೋಡಿದರೆ. ಅಥವಾ ಕೇಳಿದರೆ, ಮನಸ್ಸು ವ್ಯಾಕುಲವಾಗಿ ಬಿಡುತ್ತದೆ. ಒಂದುವೇಳೆ ಯಾರಾದರೂ ಕೇಳಿದರೆ, ಏನು ಹೇಳುತ್ತಾರೆ? ಅಂತಹದೇನೂ ಆಗಿಲ್ಲ. ಇದು ನನ್ನ ಸಂಸ್ಕಾರವಾಗಿದೆ ಎಂದು ಹೇಳುತ್ತಾರೆ. ಸರಿಹೋಗಿಬಿಡುತ್ತದೆ. ಸಂಸ್ಕಾರವಾಗಿದೆ ಎಂದು ಹೇಳುತ್ತಾರೆ. ಆದರೆ ಅದು ಹೇಗೆ ಸಂಸ್ಕಾರವಾಯಿತು? ಮನಸ್ಸು ಹಾಗೂ ಬುದ್ಧಿಯ ಆಧಾರದಿಂದ ಸಂಸ್ಕಾರವಾಗಿ ಬಿಟ್ಟಿತು. ಬ್ರಾಹ್ಮಣ ಸಂಸ್ಕಾರವಲ್ಲದ ಭಿನ್ನ ಭಿನ್ನ ಸಂಸ್ಕಾರಗಳು ಇನ್ನೂ ಇವೆ. ಯಾರೊಂದಿಗಾದರೂ ನೀವು ಯಾರಾಗಿದ್ದೀರಿ ಎಂದು ಕೇಳಿದರೆ ಏನು ಹೇಳಿಕೊಳ್ಳುತ್ತಾರೆ? ಬ್ರಹ್ಮಾಕುಮಾರಿ ಅಥವಾ ಬ್ರಹ್ಮಾಕುಮಾರ ಆಗಿದ್ದೇನೆಂದು ಹೇಳಿಕೊಳ್ಳುತ್ತಾರೆ. ಬ್ರಹ್ಮಾರವರ ಮಕ್ಕಳು ಯಾರಾದರು? ಬ್ರಾಹ್ಮಣ ಆದರೆ ಯಾವಾಗ ವ್ಯರ್ಥ ಸಂಸ್ಕಾರದ ವಶವಾಗಿ ಬಿಡುತ್ತಾರೋ ಆ ಸಮಯದಲ್ಲಿ ಬ್ರಹ್ಮಕುಮಾರ, ಬ್ರಾಹ್ಮಣ ಆಗಿರುತ್ತಾರೆಯೇ ಅಥವಾ ಕ್ಷತ್ರಿಯರಾಗಿರುತ್ತಾರೆಯೇ? ಇದಲ್ಲ. ಇದಲ್ಲ ಎಂದು ತಮ್ಮೊಂದಿಗೆ ತಾವು ಯುದ್ಧ ಮಾಡುತ್ತಾರಲ್ಲವೇ. ಆದ್ದರಿಂದ ಬ್ರಾಹ್ಮಣರಾದರೋ ಅಥವಾ ಕ್ಷತ್ರಿಯರಾದರೋ? ಹಲವು ಮಕ್ಕಳು ಎರಡು ದಿನಗಳಿಂದ ನನ್ನ ಮನಸ್ಸಿನಲ್ಲಿ ಖುಷಿಯು ಮಾಯವಾಗಿ ಬಿಟ್ಟದೆ, ಏನು ಕಾರಣವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾಸ್ತವವಾಗಿ ಆಂತರ್ಯದಲ್ಲಿ ತಿಳಿದುಕೊಂಡಿರುತ್ತಾರೆ. ಆದರೆ ಬಾಹ್ಯದಲ್ಲಿ ಏನು ಕಾರಣವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಹಾಗಾದರೆ

ಆ ದಿನ ಬ್ರಾಹ್ಮಣರಾಗಿರುತ್ತಾರೆಯೇ ಅಥವಾ ಕ್ಷತ್ರಿಯರಾಗಿರುತ್ತಾರೆಯೇ? ಯಾರ ಖುಷಿಯು ಮಾಯವಾಗುತ್ತದೆಯೋ ಅವರು ಬ್ರಾಹ್ಮಣರಾಗಿದ್ದಾರೆಯೇ? ಹಾಗಾದರೆ ಒಮ್ಮೊಮ್ಮೆ ಬ್ರಾಹ್ಮಣ ಒಮ್ಮೊಮ್ಮೆ ಕ್ಷತ್ರಿಯರಾಗುತ್ತೀರಾ? ಪಕ್ಕಾ ಮಾಲಿಕ ಆಗಿದ್ದೇನೆ ಎಂದು ಎಲ್ಲರಿಗೂ ಹೇಳಿದ್ದಿರಲ್ಲವೇ. ಆದರೆ ಆ ಸಮಯದಲ್ಲಿ ಮಾಲಿಕರಾಗಿದ್ದೀರಾ ಅಥವಾ ಪರವಶರಾಗಿದ್ದೀರಾ?

ಬಾಪ್‌ದಾದರವರು ಏನು ನೋಡಿದರೆಂದರೆ. ಮಾಲಿಕತನದ ಸ್ಥಿತಿಯನ್ನು ಅಲುಗಾಡುವಂತೆ ಮಾಡುವುದು ವಿಶೇಷವಾಗಿ ಮನಸ್ಸಾಗಿದೆ. ನೀವು ಸ್ವರಾಜ್ಯಾಧಿಕಾರಿ ರಾಜಾ ಆಗಿದ್ದೀರಿ. ಹಾಗೂ ಮನಸ್ಸು ನಿಮ್ಮ ಮಂತ್ರಿಯಾಗಿದೆ ಅಥವಾ ಮನಸ್ಸು ಮಾಲಿಕ ಹಾಗೂ ನೀವು ಮಂತ್ರಿಯಾಗಿದ್ದೀರಾ? ನೀವು ರಾಜಾ ಆಗಿದ್ದೀರಲ್ಲವೇ, ಮನಸ್ಸು ರಾಜ ಆಗಿಲ್ಲ, ಮಂತ್ರಿಯಾಗಿದೆ ತಾನೇ? ಸಹಯೋಗಿಯಾಗಿದೆಯಲ್ಲವೇ. ಹೀಗೆ ಮನಸ್ಸಿನ ಮೇಲೆ ಮಾಲಿಕತನವೂ ಸದಾ ಇರಬೇಕು. ಆಗ ಸ್ವರಾಜ್ಯಾಧಿಕಾರಿ ಆಗಿದ್ದೀರೆಂದು ಹೇಳಬಹುದು. ಇಲ್ಲದಿದ್ದರೆ ಒಮ್ಮೊಮ್ಮೆ ರಾಜ್ಯಾಧಿಕಾರಿ ಒಮ್ಮೊಮ್ಮೆ ಅಧೀನ ಆಗುವಿರಿ. ಇದರ ಕಾರಣವು ಏನಾಗಿದೆ ಏಕೆ ಪರಿವರ್ತನೆಯಾಗುತ್ತಿಲ್ಲ? ತಿಳಿದಿದ್ದರೂ ಸಹ ಸಂಸ್ಕಾರಕ್ಕೆ ವಶವಾಗಿ ಬಿಡುತ್ತೀರಿ. ಆದ್ದರಿಂದ ಮೊದಲು ಮನಸ್ಸನ್ನು ನಿಯಂತ್ರಿಸಿಕೊಳ್ಳಿರಿ. ಸಂಸ್ಕಾರವು ಹೇಗೆ ರೂಪುಗೊಂಡಿತು ಎಂಬುದನ್ನು ಇಂದು ಬಾಪ್‌ದಾದಾರವರು ತಿಳಿಸಿಕೊಟ್ಟರು. ರಾಜಾ ಆಗಿದ್ದೇನೆ ಎಂದು ಹೇಳುತ್ತೀರಿ. ಆದರೆ ರಾಜನ ಅರ್ಥವೇನೆಂದರೆ ಯಾರಲ್ಲಿ ರೂಲಿಂಗ್ ಪವರ್ (ಆಡಳಿತ ಶಕ್ತಿ) ಇದೆಯೋ ಅವರು. ಒಂದುವೇಳೆ ಹೆಸರು ರಾಜಾ ಆಗಿದ್ದು ಅವರಲ್ಲಿ ಆಡಳಿತಶಕ್ತಿ ಇಲ್ಲದಿದ್ದರೆ ಅವರ ಗತಿಯು ಏನಾಗುವುದು? ಅವರ ರಾಜ್ಯವು ನಡೆಯುತ್ತದೆಯೇ? ನಡೆಯುವುದಿಲ್ಲ. ಹಾಗಾದರೆ ಆಡಳಿತ ಶಕ್ತಿಯು ಬಂದಿದೆಯೇ? ಎಷ್ಟು ಬಂದಿದೆ ಶೇಕಡಾ ಎಷ್ಟು ಪ್ರಮಾಣದಲ್ಲಿ ಧಾರಣೆಯಾಗಿದೆ ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿರಿ.

ಒಂದು ತಪ್ಪನ್ನು ತುಂಬಾ ಮಾಡುತ್ತಿದ್ದೀರಿ. ಅದರ ಕಾರಣದಿಂದಲೂ ಸಹ ಸಂಸ್ಕಾರದ ಮೇಲೆ ವಿಜಯ ಪಡೆಯಲು ಸಾಧ್ಯವಾಗುವುದಿಲ್ಲ. ತುಂಬಾ ಸಮಯವು ಹಿಡಿಯುತ್ತದೆ ನಾಳೆಯಿಂದ ಮಾಡುವುದಿಲ್ಲ ಎಂದು ತಿಳಿದುಕೊಳ್ಳುತ್ತೀರಿ. ಆದರೆ ಯಾವಾಗ ನಾಳೆಯಾಗುತ್ತದೆಯೋ ಆಗ ಇಂದಿಗಿಂತಲೂ ನಾಳೆ ಇಂದಿನ ಸಮಸ್ಯೆಯು ದೊಡ್ಡದಾಗಿ ಬಿಡುತ್ತದೆ. ಆಗ ಏನು ಹೇಳುತ್ತೀರೆಂದರೆ, ನಿನ್ನೆ ಸಣ್ಣ ಸಮಸ್ಯೆಯಾಗಿತ್ತು ಈ ದಿನ ಬಹಳ ದೊಡ್ಡ ಸಮಸ್ಯೆಯಾಗಿತ್ತು. ಆದ್ದರಿಂದ ದೊಡ್ಡ ಸಮಸ್ಯೆಯಾಗಿರುವ ಕಾರಣ ಸ್ವಲ್ಪ ತಪ್ಪಾಗಿ ಬಿಟ್ಟಿತು ಮುಂದೆ ಸರಿಪಡಿಸಿಕೊಳ್ಳುವೆನು, ಎಂದು ಹಿರಿಯರಿಗೆ ಅಥವಾ ನಿಮ್ಮ ಮನಸ್ಸಿಗೆ ಭರವಸೆ ಕೊಡುತ್ತೀರಿ ಹಾಗೂ ಈ ಭರವಸೆ ಕೊಡುತ್ತಾ ನಡೆಯುತ್ತೀರಿ. ಆದರೆ ಇದು ಭರವಸೆಯಲ್ಲ ಇದು ಮೋಸವಾಗಿದೆ. ಆ ಸಮಯದಲ್ಲಿ ಸ್ವಲ್ಪ ಸಮಯದವರೆಗೆ ನಿಮಗೆ ಅಥವಾ ಅನ್ಯರಿಗೆ ಭರವಸೆ ಕೊಡಬೇಕು. ಆಮೇಲೆ ಸರಿಯಾಗಿ ಬಿಡುತ್ತೇನೆ ಎಂದು ನೀವು ತಿಳಿದುಕೊಳ್ಳುತ್ತೀರಿ. ಆದರೆ ಹೀಗೆ ಸ್ವಯಂ ನಿಮಗೆ ಮೋಸ ಮಾಡಿಕೊಳ್ಳುವ ಅಭ್ಯಾಸವನ್ನು ಪಕ್ಕಾ ಮಾಡಿಕೊಳ್ಳುತ್ತಾ ಹೋಗುತ್ತೀರಿ. ಅದು ಈ ಸಮಯದಲ್ಲಿ ಗೊತ್ತಾಗುವುದಿಲ್ಲ. ಆದರೆ ಯಾವಾಗ ಪ್ರತ್ಯಕ್ಷದಲ್ಲಿ ಮೋಸವಾಗುತ್ತದೆಯೋ ಆಗ ಇದು ಮೋಸವೇ ಆಗಿದೆಯೆಂದು ತಿಳಿದುಕೊಳ್ಳುತ್ತೀರಿ. ಹೀಗೆ ಏನು ತಪ್ಪು ಮಾಡುತ್ತೀರಿ? ದೊಡ್ಡವರಾಗಲೀ ಅಥವಾ ಸಣ್ಣವರಾಗಲೀ ಒಬ್ಬರಿಗೊಬ್ಬರು ಶಿಕ್ಷಣ ನೀಡುವಾಗ ಏನು ಹೇಳುತ್ತೀರಿ? ಇದು ನನ್ನ ಸ್ವಭಾವವಾಗಿದೆ, ನನ್ನ ಸಂಸ್ಕಾರವಾಗಿದೆ ಎಂದು. ಕೆಲವರದು ಅಭಿಮಾನದ ಸಂಸ್ಕಾರ, ಕೆಲವರದು ದೂರಸರಿಸುವ

ಸಂಸ್ಕಾರ, ಕೆಲವರದು ಮಾತುಮಾತಿಗೆ ಪರಚಿಂತನೆ ಮಾಡುವ ಸಂಸ್ಕಾರ, ಕೆಲವರದು ಪರ ಚಿಂತನೆಯನ್ನು ಕೇಳುವ ಸಂಸ್ಕಾರ, ವಿಧವಿಧವಾದ ಸಂಸ್ಕಾರಗಳು...ಇವುಗಳ ಬಗ್ಗೆಯಂತೂ ತಂದೆಗಿಂತಲೂ ಹೆಚ್ಚಾಗಿ ನಿಮಗೇ ತಿಳಿದಿದೆ. ಆದರೆ ಬಾಪ್‌ದಾದಾ ಕೇಳುತ್ತಿದ್ದಾರೆ- ಯಾವುಗಳನ್ನಾದರೆ ನನ್ನ ಸಂಸ್ಕಾರ ಎಂದು ಹೇಳುತ್ತಿದ್ದೀರೋ ಅವು ನಿಮ್ಮವೇ? ಯಾರವು? (ರಾವಣನ ಸಂಸ್ಕಾರಗಳು) ನನ್ನವು ಎಂದು ಏಕೆ ಹೇಳುತ್ತಿದ್ದೀರಿ? ರಾವಣಾಸುರನ ಸಂಸ್ಕಾರಗಳು ಎಂದು ಏಕೆ ಹೇಳುತ್ತಿಲ್ಲ? ನನ್ನ ಸಂಸ್ಕಾರ ಎನ್ನುತ್ತಿದ್ದೀರಿ. ಈ "ನನ್ನದು" ಎಂಬ ಮಾತು ಪುರುಷಾರ್ಥದಲ್ಲಿ ಬಲಹೀನ(ದುರ್ಬಲ)ರನ್ನಾಗಿ ಮಾಡಿಬಿಡುತ್ತದೆ. ರಾವಣನ ವಸ್ತುಗಳನ್ನು ಏಕೆ ಒಳಗಡೆ ಬಚ್ಚಿಟ್ಟುಕೊಳ್ಳುತ್ತಿದ್ದೀರಿ? ಜನರಂತೂ ರಾವಣನ ಬೊಂಬೆಯನ್ನು ಸುಟ್ಟುಹಾಕುತ್ತಾರೆ. ಕೊಂದ ನಂತರ ಸುಡುತ್ತಾರೆ. ಸುಟ್ಟಮೇಲೆ ಏನು ಸ್ವಲ್ಪ ಉಳಿಯುತ್ತದೆಯೋ ಅದನ್ನೂ ಸಹ ನದಿಯ ನೀರಿನಲ್ಲಿ ವಿಸರ್ಜನೆ ಮಾಡಿಬಿಡುತ್ತಾರೆ. ಆದರೆ ನೀವು ನನ್ನದಾಗಿದೆಯೆಂದು ಹೇಳಿ ಇಟ್ಟುಕೊಂಡಿದ್ದೀರಿ. ಆದ್ದರಿಂದ ಎಲ್ಲಿ ರಾವಣನ ವಸ್ತುವು ಇರುತ್ತದೆಯೋ ಅಲ್ಲಿ ಅಶುದ್ಧಿಯ ಜೊತೆಯಲ್ಲಿ ಶುದ್ದ ಸಂಸ್ಕಾರವು ಒಟ್ಟಿಗೆ ಇರುತ್ತದೆಯೇ? ಇರುತ್ತದೆಯೇ? ಹಾಗೂ ರಾಜ್ಯವು ಯಾರದಾಗಿದೆ? ಅಶುದ್ಧದ್ದು. ಶುದ್ಧದ ರಾಜ್ಯವಂತೂ ಅಲ್ಲವಲ್ಲವೇ. ಹೀಗೆ ರಾಜ್ಯವು ಅಶುದ್ಧದ್ದಾಗಿದೆ ಹಾಗೂ ಅಶುದ್ಧ ವಸ್ತುವನ್ನು ನಿಮ್ಮ ಬಳಿ ಜೋಪಾನ ಮಾಡಿ ಇಟ್ಟುಕೊಂಡಿದ್ದೀರಿ. ಹೇಗೆ ಚಿನ್ನ ಅಥವಾ ವಜ್ರವನ್ನು ಜೋಪಾನವಾಗಿ ಇಟ್ಟುಕೊಳ್ಳುತ್ತಾರೆ. ಹೀಗೆ ಅಶುದ್ಧ ಹಾಗೂ ಶುದ್ಧ ಇವೆರಡರ ಯುದ್ಧವು ನಡೆಯುತ್ತಿರುವುದರಿಂದ ಪದೇ ಪದೇ ಬ್ರಾಹ್ಮಣರಿಂದ ಕ್ಷತ್ರಿಯರಾಗಿ ಬಿಡುತ್ತೀರಿ. ನನ್ನ ಸಂಸ್ಕಾರವು ಯಾವುದಾಗಿದೆ? ಯಾವುದು ತಂದೆಯ ಸಂಸ್ಕಾರವಾಗಿದೆಯೋ ಅದು, ವಿಶೇಷವಾಗಿ ವಿಶ್ವಕಲ್ಯಾಣಕಾರಿ, ಶುಭಚಿಂತನಧಾರಿ, ಸರ್ವರ ಪ್ರತಿ ಶುಭಭಾವನೆ ಶುಭಕಾಮನಾಧಾರಿ, ಇವೇ ನಮ್ಮ (ಒರಿಜಿನಲ್) ಮೂಲ ಸಂಸ್ಕಾರವಾಗಿವೆ. ಉಳಿದವುಗಳಲ್ಲ ಹಾಗೂ ಇದೇ ಒಳಗಡೆ ಅಡಗಿರುವ ಅಶುದ್ಧಿಯು ಸಂಪೂರ್ಣ ಶುದ್ಧ ಆಗುವುದರಲ್ಲಿ ವಿಘ್ನವನ್ನು ಹಾಕುತ್ತದೆ. ಆದ್ದರಿಂದ ಏನು ಆಗಲು ಬಯಸುತ್ತೀರೊ, ಲಕ್ಷ್ಯ ವನ್ನು ಇಟ್ಟುಕೊಳ್ಳುತ್ತೀರೋ ಅದರ ಪ್ರತ್ಯಕ್ಷ ಲಕ್ಷಣದಲ್ಲಿ ಅಂತರವುಂಟಾಗಿ ಬಿಡುತ್ತದೆ.

ಅಧಿಕ ಸಂಖ್ಯೆಯ ಮಕ್ಕಳು ವಿಚಾರ ಮಾಡಿದ್ದೀರಿ. ಅನೇಕರು ಸಂಕಲ್ಪವನ್ನೂ ಮಾಡಿದ್ದೀರಿ. ಬರೆದೂ ಇದ್ದೀರಿ ಈ ಡೈಮಂಡ್ ಜೂಬ್ಲಿಯಲ್ಲಿ ತಂದೆಯ ಸಮಾನ ವಜ್ರವಾಗಲೇ ಬೇಕು ಎಂದು. ಈ ಸಂಕಲ್ಪವಿದೆಯೇ? ಅಥವಾ ವಿಚಾರ ಮಾಡಬೇಕಾಗುತ್ತದೆಯೋ? ವಿಚಾರ ಮಾಡಬೇಕಾಗಿದ್ದರೆ ವಿಚಾರಮಾಡಿರಿ. ಲೋಕೋಕ್ತಿಯೂ ಇದೆ "ಏನು ಮಾಡಿದರೆ ಅದನ್ನೇ ಪಡೆಯುತ್ತೀರಿ" ಎಂದು ಅಷ್ಟೇ ಹೊರತು ಏನು ಯೋಚಿಸಿದರೆ ಅದನ್ನೇ ಪಡೆಯುತ್ತೀರಿ ಎನ್ನುವುದಿಲ್ಲವಲ್ಲ. ಹೀಗೆ ಸಂಕಲ್ಪವೇನೋ ತುಂಬಾ ಉತ್ತಮವಾದುದನ್ನು ಮಾಡುತ್ತೀರಿ. ಬಾಪ್‌ದಾದಾರವರು ಸಹ ಓದಿ ಅಥವಾ ಅದನ್ನು ಕೇಳಿಸಿಕೊಂಡು ಖುಷಿಪಡುತ್ತಿದ್ದಾರೆ. ಆದರೆ ಯಾವ ರಾವಣಾಸುರನ ವಸ್ತುಗಳನ್ನು ಬಚ್ಚಿಟ್ಟಿದ್ದೀರೋ ಅವು ಮನಸ್ಸಿನ ಅಧಿಕಾರಿಯಾಗಲು ಬಿಡುತ್ತಿಲ್ಲ. ನನ್ನ ಅಭ್ಯಾಸ, ನನ್ನ ಸ್ವಭಾವ, ನನ್ನ ಸಂಸ್ಕಾರ, ನನ್ನ ಪ್ರವರ್ತನೆ, ಇವೆಲ್ಲವೂ ರಾವಣನ ಆಸ್ತಿ. ಇವೆಲ್ಲವೂ ಮನಸ್ಸಿನಲ್ಲಿ ಇಟ್ಟುಕೊಂಡರೆ ಇನ್ನೂ ಮನಸ್ಸಿನಲ್ಲಿ ಹೃದಯರಾಮನು ಎಲ್ಲಿ ಕುಳಿತುಕೊಳ್ಳುತ್ತಾರೆ? ರಾವಣನ ಆಸ್ತಿಯ ಮೇಲೆ ಕುಳಿತುಕೊಳ್ಳಬೇಕೇ? ಆದ್ದರಿಂದ ಈಗ ಇದನ್ನು ನಿರ್ಮೂಲ ಮಾಡಿರಿ.

ಯಾವಾಗ ನನ್ನದು ಎನ್ನುವ ಶಬ್ದವನ್ನು ನುಡಿಯುತ್ತೀರೋ ಆಗ ನನ್ನ ಸ್ವಭಾವ ಅಥವಾ ನನ್ನ ಸಂಸ್ಕಾರವು ಏನಾಗಿದೆಯೆಂದು ವಿಚಾರ ಮಾಡಿರಿ ಅಲ್ಲದೆ ಮನಸ್ಸನ್ನು ಪ್ರಾಪಂಚಿಕ ಜನರೂ ಸಹ ಕುದುರೆಯಾಗಿದೆ ಎಂದು ಹೇಳುತ್ತಾರೆ. ಅದು ತುಂಬಾ ಓಡುತ್ತದೆ. ಹಾಗೂ ತೀವ್ರ ವೇಗದಿಂದ ಓಡುತ್ತದೆ. ಆದರೆ ನಿಮ್ಮ ಮನಸ್ಸು ಓಡಬೇಕೇ? ನಿಮಗೆ ಶಕ್ತಿಶಾಲಿಯಾದ ಶ್ರೀಮತದ ಲಗಾಮು ಇದೆ. ಒಂದುವೇಳೆ ಲಗಾಮು ಬಿಗಿಯಾಗಿದ್ದರೆ ಚಂಚಲವಾಗಲು ಸಾಧ್ಯವಾಗುವುದಿಲ್ಲ. ಆದರೆ ಏನು ಮಾಡುತ್ತಿದ್ದೀರಿ? ಬಾಪ್‍ದಾದಾರವರು ನೋಡುತ್ತಾ ಇರುವುದರಿಂದ ನಗು ಕೂಡಾ ಬರುತ್ತದೆ. ಸವಾರಿ ಮಾಡುತ್ತಿದ್ದಾಗ ಲಗಾಮೂ ಕೈಯಲ್ಲಿ ಇದೆ. ಆದರೆ ಒಂದುವೇಳೆ ನಡೆಯುತ್ತಾ ನಡೆಯುತ್ತಾ ಲಗಾಮು ಹಿಡಿದುಕೊಂಡಿರುವವರ ಬುದ್ಧಿ ಅಥವಾ ಮನಸ್ಸು ಯಾವುದಾದರೂ ಸೈಡ್ ಸೀನ್ (ರಸ್ತೆಯ ಬದಿಯ ದೃಶ್ಯದ) ಕಡೆ ಆಕರ್ಷಿತವಾಗಿಬಿಟ್ಟರೆ ಏನಾಗುತ್ತದೆ? ಲಗಾಮೂ ಸಡಿಲವಾಗುತ್ತದೆ ಹಾಗೂ ಲಗಾಮು ಸಡಿಲವಾಗುವುದರಿಂದ ಮನಸ್ಸು ಅವಶ್ಯವಾಗಿ ಚಂಚಲವಾಗಿಯೇ ಆಗುತ್ತದೆ. ಅದ್ದರಿಂದ ಶ್ರೀಮತದ ಲಗಾಮನ್ನು ಸದಾ ಸ್ಮೃತಿಯಲ್ಲಿಟ್ಟುಕೊಳ್ಳಿರಿ. ಯಾವಾಗಲಾದರೂ ಮನಸ್ಸು ಚಂಚಲವಾಗುವಂತಹ ಪರಿಸ್ಥಿತಿಯೇನಾದರೂ ಬಂದರೆ ಶ್ರೀಮತದ ಲಗಾಮನ್ನು ಬಿಗಿ ಮಾಡಿರಿ ಆಗ ಏನೂ ಆಗುವುದಿಲ್ಲ. ಇದರಿಂದ ಲಕ್ಷ್ಯವನ್ನು ಮುಟ್ಟಿಬಿಡುವಿರಿ, ಪ್ರತಿಯೊಂದು ಹೆಜ್ಜೆಗೂ ಶ್ರೀಮತವಿದೆ. ಕೇವಲ ಬ್ರಹ್ಮಚಾರಿಯಾಗಿರಿ ಎಂಬುದೇ ಶ್ರೀಮತವಲ್ಲ. ಪ್ರತಿಯೊಂದು ಕರ್ಮದ ಸಲುವಾಗಿಯೂ ಶ್ರೀಮತವಿದೆ. ನಡೆಯುವುದು, ಊಟ ಮಾಡುವುದು, ಪಾನೀಯ ಸೇವಿಸುವುದು, ಕೇಳುವುದು, ಮಾತನಾಡುವುದು ಎಲ್ಲದರ ಸಲುವಾಗಿಯೂ ಶ್ರೀಮತವಿದೆ. ಇದೆಯೋ, ಇಲ್ಲವೋ? ಒಂದುವೇಳೆ ನೀವು ಪರಚಿಂತನೆ ಮಾಡುತ್ತಾ ಇದ್ದರೆ ಅದು ಶ್ರೀಮತವಾಗಿದೆಯೇ? ಆದ್ದರಿಂದ ಶ್ರೀಮತವನ್ನು ಲೂಜ್(ನಿರ್ಲಕ್ಷ್ಯ) ಮಾಡಿದರೆ. ಮನಸ್ಸಿಗೆ ಚಂಚಲವಾಗಲು ಅವಕಾಶವು ದೊರೆಯುತ್ತದೆ. ಆಮೇಲೆ ಅದಕ್ಕೆ ಅಭ್ಯಾಸವಾಗಿ ಬಿಡುತ್ತದೆ. ಹೀಗೆ ಅಭ್ಯಾಸ ಮಾಡಿಸುವವರು ಯಾರಾಗಿದ್ದಾರೆ. ನೀವೇ ಆಗಿದ್ದೀರಲ್ಲವೇ. ಆದ್ದರಿಂದ ಮೊದಲು ಮನಸ್ಸಿನ ರಾಜಾ ಆಗಿರಿ. ಪರಿಶೀಲನೆ ಮಾಡಿಕೊಳ್ಳಿರಿ - ಒಳಗೊಳಗೇ ಈ ಮಂತ್ರಿಯು ತನ್ನ ರಾಜ್ಯವನ್ನು ಸ್ಥಾಪನೆ ಮಾಡುತ್ತಾ ಇಲ್ಲವಲ್ಲ ಎಂದು? ಹೇಗೆ ಈಗಿನ ಕಾಲದ ರಾಜ್ಯದಲ್ಲಿ ಪ್ರತ್ಯೇಕ ಗುಂಪನ್ನು ಮಾಡಿಕೊಂಡು ಅಧಿಕಾರದಲ್ಲಿ ಬಂದುಬಿಡುತ್ತಾರೆ ಹಾಗೂ ಮುಂಚೆ ಅಧಿಕಾರದಲ್ಲಿದ್ದವರನ್ನು ಪದಚ್ಯುತಗೊಳಿಸಲು ಪ್ರಯತ್ನ ಮಾಡುತ್ತಾರೆ. ಈ ಮನಸ್ಸೂ ಸಹ ಹಾಗೆಯೇ ಮಾಡುತ್ತದೆ. ಬುದ್ಧಿಯನ್ನೂ ಸಹ ತನ್ನ ಪರವಾಗಿ ಮಾಡಿಕೊಂಡು ಬಿಡುತ್ತದೆ. ಬಾಯಿಯನ್ನು, ಕಿವಿಗಳನ್ನು, ಎಲ್ಲಾ... ಕರ್ಮೇಂದ್ರಿಯಗಳನ್ನೂ ತನ್ನ ವಶಮಾಡಿಕೊಂಡು ಬಿಡುತ್ತದೆ. ಆದ್ದರಿಂದ ಪ್ರತಿದಿನವೂ ಪರಿಶೀಲನೆ ಮಾಡಿಕೊಳ್ಳಿರಿ. ಸಮಾಚಾರವನ್ನು ಕೇಳಿರಿ. ಹೇ ಮಂತ್ರಿ ಮನಸ್ಸೇ ನೀನು ಏನು ಮಾಡಿದೆ? ಏನಾದರೂ ಮೋಸ ಮಾಡಲಿಲ್ಲ ತಾನೇ? ಎಲ್ಲಿಯಾದರೂ ಒಳೊಳಗೇ ಗುಂಪು ಕಟ್ಟಿಕೊಂಡು ನಿಮ್ಮನ್ನು ರಾಜನಿಗೆ ಬದಲಾಗಿ ಗುಲಾಮನನ್ನಾಗಿ ಮಾಡಿಬಿಡಬಹುದು, ಹಾಗೆ ಆಗಬಾರದು. ನೋಡಿರಿ ಬ್ರಹ್ಮಾಬಾಬಾ ಆದಿಯಲ್ಲಿ ಪ್ರತಿದಿನವೂ ಈ ದರ್ಬಾರನ್ನು ನಡೆಸುತ್ತಿದ್ದರು. ಅದರಲ್ಲಿ ಎಲ್ಲಾ ಸಹಯೋಗೀ ಸಾಥಿಗಳಿಂದ ಸಮಾಚಾರ ಕೇಳುತ್ತಿದ್ದರು. ಇದು ಪ್ರತಿದಿನದ ಬ್ರಹ್ಮಾಬಾಬಾರವರ ಆದಿಯ ದಿನಚರಿಯಾಗಿತ್ತು. ಕೇಳಿದ್ದೀರಲ್ಲವೇ? ಹೀಗೆ ಬ್ರಹ್ಮಾಬಾಬಾರವರೂ ಸಹ ಪರಿಶ್ರಮ ಮಾಡಿದ್ದಾರಲ್ಲವೇ. ಗಮನ ಇಟ್ಟುಕೊಂಡರು ಆದ್ದರಿಂದ ಸ್ವರಾಜ್ಯ ಅಧಿಕಾರಿಯಾದರು. ಶಿವತಂದೆಯಂತೂ ನಿರಾಕಾರ ಆಗಿದ್ದಾರೆ. ಆದರೆ ಬ್ರಹ್ಮಾಬಾಬಾರವರಂತೂ ನಿಮ್ಮ ಸಮಾನ ಇಡೀ ಜೀವನದ ಪುರುಷಾರ್ಥದಿಂದ ಪ್ರಾಲಬ್ಧವನ್ನು ಪ್ರಾಪ್ತಿ

ಮಾಡಿಕೊಂಡರು. ಆದ್ದರಿಂದ ಬ್ರಹ್ಮಾಬಾಬಾರವರನ್ನು ಅನುಕರಣೆ ಮಾಡಿರಿ(ಅನುಸರಿಸಿರಿ). ಮನಸ್ಸು ತುಂಬಾ ಚಂಚಲ ಆಗಿದೆ ಹಾಗೂ ತುಂಬಾ ತೀವ್ರಗತಿಯುಳ್ಳದಾಗಿದೆ. ಒಂದು ಸೆಕೆಂಡಿನಲ್ಲಿ ನಿಮ್ಮನ್ನು ವಿದೇಶದಲ್ಲಿ ಎಲ್ಲೆಡೆಯೂ ಸುತ್ತಿಸಿಕೊಂಡು ಬರಬಲ್ಲದು. ಆದ್ದರಿಂದ ಏನು ಕೇಳಿದಿರಿ? ಬಾಲಕರಿಂದ ಮಾಲಿಕರಾಗಿರಿ. ಬಾಲಕನಾಗಿ ಬಿಟ್ಟೆನು. ಆಸ್ತಿಯು ಸಿಕ್ಕಿಬಿಟ್ಟಿತೆಂದು ಖುಷಿಯಾಗಿರುವುದು ಸರಿಯಲ್ಲ. ಆದರೆ ಒಂದುವೇಳೆ ಆಸ್ತಿಗೆ ಮಾಲಿಕರಾಗದಿದ್ದರೆ. ಬಾಲಕತನದಿಂದ ಏನು ಲಾಭವಾಯಿತು? ಬಾಲಕನ ಅರ್ಥವೇ ಮಾಲಿಕನಾಗುವುದಾಗಿದೆ. ಮಾಲಿಕನೂ ಆಗಿರಿ, ಕೇವಲ ಆಸ್ತಿಯನ್ನು(ವಾರಸತ್ವ) ನೋಡಿಕೊಂಡು ಖುಷಿಯಾಗಬೇಡಿರಿ. ಸ್ವರಾಜ್ಯ ಅಧಿಕಾರಿಯಾಗಿರಿ ಇಷ್ಟು ಸಣ್ಣದಾದ ಕಣ್ಣು ಬಿಂದುವಾಗಿದೆ ಅದೂ ಸಹ ಮೋಸ ಮಾಡಿಬಿಡುತ್ತದೆ ಆದ್ದರಿಂದ ಬಾಪ್‌ದಾದಾರವರು ಎಲ್ಲಾ ಮಕ್ಕಳೂ ಸ್ವರಾಜ್ಯಾಧಿಕಾರಿ ರಾಜನಾಗುವುದನ್ನು ನೋಡಲು ಬಯಸುತ್ತಾರೆ. ಅಧಿಕಾರಿಯು ಅಧೀನವಾಗಿರುವುದಿಲ್ಲ. ಏನು ಆಗುವಿರಿ? ಬಾಲಕನಿಂದ ಮಾಲಿಕ ಹಿಂದೆ ಕುಳಿತಿರುವವರು ಏನಾಗುವಿರಿ? ಬಾಲಕನಿಂದ ಮಾಲಿಕ ಆಗುವೆವೆಂದು ಜೋರಾಗಿ ಹೇಳಿರಿ. ಮಾತೆಯರು ಏನಾಗುವಿರಿ? ಬಾಲಕನಿಂದ ಮಾಲಿಕ ಹಾಗೂ ರಾವಣನ ವಸ್ತುವನ್ನಂತೂ ಇಲ್ಲಿ ಸಭಾಂಗಣದಲ್ಲಿಯೇ ಬಿಟ್ಟು ಹೋಗಿರಿ. ಇದು ತಪಸ್ಸಿನ ಸ್ಥಾನವಾಗಿದೆಯಲ್ಲವೇ? ತಪಸ್ಸನ್ನು ಅಗ್ನಿಯೆಂದು ಕರೆಯಲಾಗುತ್ತದೆ. ಆದ್ದರಿಂದ ಅಗ್ನಿಯಲ್ಲಿ ರಾವಣನ ವಸ್ತುವು ವಿನಾಶವಾಗಿ ಬಿಡುತ್ತದೆ.

ಮಕ್ಕಳಿಗೆ ಇನ್ನೂ ರಾವಣನೊಂದಿಗೆ ಪ್ರೀತಿಯಿರುವುದನ್ನು ಬಾಪ್‌ದಾದಾರವರು ನೋಡಿದರು. ಪ್ರೀತಿಯಿದೆಯೇ? ಮನಸ್ಸಿನಿಂದ ಪ್ರೀತಿಸುವುದಿಲ್ಲ. ಆದರೆ ಉಳಿದು ಬಿಟ್ಟಿದೆ. ಈಗ ಇದನ್ನು ವಿನಾಶಮಾಡಿರಿ. ಶಿಕ್ಷಕಿಯರು ಏನು ಮಾಡುವಿರಿ? ಇಲ್ಲಿಯೇ ಬಿಟ್ಟು ಹೋಗುವಿರೋ ಅಥವಾ ಟ್ರೈನಿನಲ್ಲಿ ಎಸೆದು ಬಿಡುವಿರೋ? ಏಕೆಂದರೆ 63 ಜನ್ಮಗಳ ಹಳೆಯ ವಸ್ತುವಾಗಿರುವುದರಿಂದ ಸ್ವಲ್ಪ ಪ್ರೀತಿಯೇನೋ ಇದೆ. ಆದ್ದರಿಂದ ಪಾಂಡವರು ಏನು ಮಾಡುವಿರಿ? ಇಲ್ಲಿಯೇ ಬಿಟ್ಟು ಹೋಗುವಿರೋ ಅಥವಾ ಕೆಳಗೆ ಅಬೂರೋಡ್ ನಲ್ಲಿ ಬಿಡುವಿರೋ? ಇಲ್ಲಿಯೇ ಬಿಟ್ಟು ಹೋಗಿರಿ ಬಿಡಲು ತಯಾರಾಗಿದ್ದೀರಾ? ಅರೆ ಮನಸ್ಸಿನಲ್ಲಿ ಆಗಲಿ ಎಂದು ಹೇಳುತ್ತಿದ್ದೀರಿ. ಬಾಪ್‌ದಾದಾರವರು ಪ್ರತಿದಿನವೂ ಮಕ್ಕಳಲ್ಲಿ ಯಾರಾದರೊಬ್ಬರ ನ್ಯೂನತೆಗಳನ್ನು ಪರಿಶೀಲನೆ ಮಾಡುತ್ತಾರೆ. ಏಕೆಂದರೆ ಪರಿವರ್ತನೆ. ಆಗಬೇಕಲ್ಲವೇ. ಆದ್ದರಿಂದ ಚೆಕ್ ಮಾಡಿಕೊಂಡರೆ ಚೇಂಜ್ (ಪರಿವರ್ತನೆ) ಆಗುವಿರಲ್ಲವೇ.

ಒಳ್ಳೆಯದು. ಈಗಂತೂ ಹೆಚ್ಚಿನ ಅವಕಾಶವು ದೊರೆತಿದೆ. ಮೊದಲನೆಯ ಸಲ ಯಾರು ಬಂದಿದ್ದೀರೋ ಅವರು ಕೈ ಎತ್ತಿರಿ. ಇದಂತೂ ಹೊಸಬರಿಗೆ ಅಥವಾ ಹಳಬರಿಗೆ ಇದ್ದಕ್ಕಿದ್ದಂತೆಯೇ ಲಾಟರಿಯು ಸಿಕ್ಕಿದೆ. ಹೀಗೆ, ಅನಿರೀಕ್ಷಿತವಾದ ಲಾಟರಿಯ ಮಹತ್ವವು ಇರುತ್ತದೆ. ಆದ್ದರಿಂದ ಈ ಲಾಟರಿಯನ್ನು ಸದಾ ಪ್ರತ್ಯಕ್ಷ ಕರ್ಮದಲ್ಲಿ ತರುತ್ತಾ ವೃದ್ಧಿ ಮಾಡಿಕೊಳ್ಳುತ್ತಾ ಇರಿ. ಎಷ್ಟು ಸ್ವಯಂ ನಿಮ್ಮ ಸಲುವಾಗಿ ಅಥವಾ ಅನ್ಯರ ಸಲುವಾಗಿ ಕಾರ್ಯದಲ್ಲಿ ಉಪಯೋಗಿಸುವಿರೋ? ಅಷ್ಟು ವೃದ್ಧಿಯಾಗುತ್ತಾ ಇರುವುದು. ಆದ್ದರಿಂದ ವೃದ್ಧಿ ಮಾಡಿಕೊಳ್ಳುತ್ತಾ ಇರಿ. ಈ ಲಾಟರಿಯ ದಿನವನ್ನು ಮರೆಯಬೇಡಿರಿ. ನೆನಪಿಟ್ಟುಕೊಳ್ಳಿರಿ.

**ನಾಲ್ಕೂ ಕಡೆಯ ಬಾಲಕರಿಂದ ಮಾಲಿಕರಾಗಿ ಡಬಲ್ ಅಧಿಕಾರವನ್ನು ತೆಗೆದುಕೊಳ್ಳುವ ಶ್ರೇಷ್ಠ ಆತ್ಮರು, ಸದಾ ಸ್ವರಾಜ್ಯಾಧಿಕಾರಿಯಾಗಿ ನಿಮ್ಮ ರಾಜ್ಯವನ್ನು ನಡೆಸುವ ಭಾಗ್ಯವಂತ ಆತ್ಮರು, ಸದಾ ನಿಮ್ಮ ತಂದೆಯ ಸಂಸ್ಕಾರವೇ ನನ್ನ ಸಂಸ್ಕಾರವಾಗಿದೆ ಎನ್ನುವ ವಿಧಿಯಿಂದ ಸೇವೆಯಲ್ಲಿ ಮುನ್ನಡೆಯುವ ಶ್ರೇಷ್ಠ ಸೇವಾಧಾರೀ ಅತ್ಮರಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 09-01-1996

*ಬಾಲಕರಿಂದ ಮಾಲಿಕರು ಎಂಬ ನಶೆಯಲ್ಲಿರಲು ಮನಸ್ಸಿನ ರಾಜರಾಗಿರಿ*

ನೀವು ಬಾಲಕರೂ ಆಗಿದ್ದೀರಿ.  ಮಾಲೀಕರೂ ಆಗಿದ್ದೀರಿ. ವಿಶ್ವದ ಮಾಲೀಕರಂತೂ ಭವಿಷ್ಯದಲ್ಲಿ ಆಗುವಿರಿ ಆದರೆ ತಂದೆಯ ಸರ್ವ ಖಜಾನೆಗಳ ಮಾಲಿಕರು ಈಗಲೇ ಆಗಿದ್ದೀರಿ. ವಿಶ್ವ ರಾಜ್ಯಾಧಿಕಾರಿ ಅಂತೂ ಭವಿಷ್ಯದಲ್ಲಿ ಆಗುವಿರಿ. ಸ್ವರಾಜ್ಯಾಧಿಕಾರಿಯಾಗಿ ಈಗಲೇ ಆಗುವಿರಿ. ಆದ್ದರಿಂದ ಬಾಲಕರೂ ಆಗಿದ್ದೀರಿ ಹಾಗೂ ಮಾಲಿಕರು ಆಗಿದ್ದೀರಿ. ಬಾಲಕತನದ ನಶೆಯಂತೂ ಸದಾ ಇದ್ದೇ ಇರುತ್ತದೆ.  ಏಕೆಂದರೆ ಒಂದು ವೇಳೆ ಸ್ಮೃತಿಯಲ್ಲಿ ಕುಳಿತಾಗಲು ಬಾಬಾ ಎಂಬ ನೆನಪಂತೂ ಇದ್ದೇ ಇರುತ್ತದೆ. ಮಕ್ಕಳಾದಾಗಲೇ ಬಾಬಾ ಎಂದು ಹೇಳಬಲ್ಲಿರಿ. ಆದ್ದರಿಂದ ಗುಪ್ತ ಅಥವಾ ಪ್ರತ್ಯಕ್ಷ ರೂಪದಲ್ಲಿ ಬಾಲಕತನದ ನಶೆಯು ಇದೆ. ಮಾಲೀಕತನದ ಸ್ಥಿತಿಯನ್ನು ಅಲುಗಾಡುವಂತೆ ಮಾಡುವುದು ವಿಶೇಷವಾಗಿ ಮನಸ್ಸೇ ಆಗಿದೆ ಆದ್ದರಿಂದ ಮನಸ್ಸಿನ ಮೇಲೆ ರಾಜರಾಗಿರಿ ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ,  ಶಿವ ಪರಮಾತ್ಮ ನನ್ನ ತಂದೆ.

1. ನಾನು ವರ್ತಮಾನದಲ್ಲಿ ಸ್ವರಾಜ್ಯಾಧಿಕಾರಿ ಮತ್ತು ಭವಿಷ್ಯದಲ್ಲಿ ವಿಶ್ವ ರಾಜಾಧಿಕಾರಿ ಯಾಗಿದ್ದೇನೆ.

2. ನಾನು ಸೇವೆಯಲ್ಲಿ ಮನಸ್ಸಿನಿಂದ ಬಾಬಾ ಬಾಬಾ ಎನ್ನುತ್ತಾ ಪ್ರತ್ಯಕ್ಷ ಫಲವಾಗಿ ಸದಾ ಖುಷಿ ಮತ್ತು ಶಕ್ತಿಯನ್ನು ಅನುಭವ ಮಾಡುವ ಸತ್ಯವಾದ ಸೇವಾದಾರಿಯಾಗಿದ್ದೇನೆ.

3. ನಾನು ಬಾಲಕನಿಂದ ಸ್ವರಾಜ್ಯಾಧಿಕಾರಿಯಾಗಿ, ಸರ್ವಖಜಾನೆಗಳಿಗೆ  ಮಾಲಿಕನಾಗುವ ಡಬಲ್ ಮಾಲೀಕನು, ಅಧಿಕಾರಿ.

4. ಸ್ವರಾಜ್ಯವು ನನ್ನ ಜನ್ಮಸಿದ್ಧ ಅಧಿಕಾರವಾಗಿದೆ.

5. ನಾನು ಕರ್ಮೇಂದ್ರಿಯಗಳನ್ನು ಕರ್ಮಚಾರಿಗಳನ್ನಾಗಿ ಮಾಡುವ ಸ್ವರಾಜ್ಯಾಧಿಕಾರಿ ಮತ್ತು ಕರ್ಮೇಂದ್ರಿಯಾಜೀತ್ ಸ್ವರೂಪ.

6. ನಾನು ಮನ್ಮನಾಭವ ಎಂಬ ಮಂತ್ರದಿಂದ ಮನಸ್ಸನ್ನು ನಿಯಂತ್ರಿಸುವ ರಾಜನಾಗಿದ್ದೇನೆ.

7. ನಾನು ಮಾಲಿಕನಾಗಿ ವ್ಯರ್ಥ ಸಂಸ್ಕಾರಗಳನ್ನು ಸಮಾಪ್ತಿ ಮಾಡಿ ಖುಷಿಯನ್ನು ಅನುಭವ ಮಾಡುವ ಬ್ರಾಹ್ಮಣನು.

8. ನನಗೆ ಮನಸ್ಸಿನ ಮೇಲೆ ಮಾಲೀಕತನದ ಸ್ಥಿತಿ ಸದಾ ಇದೆ.

9. ನಾನು ನನ್ನಲ್ಲಿ ಆಡಳಿತ ಶಕ್ತಿ ಎಷ್ಟು ಪ್ರತಿಶತವಿದೆ ಎಂದು ಪರಿಶೀಲಿಸಿಕೊಂಡು ಪರಿವರ್ತನೆ ಮಾಡಿಕೊಂಡಿದ್ದೇನೆ.

10. ನಾನು ಇದು ನನ್ನ ಸ್ವಭಾವ, ಇದು ನನ್ನ ಸಂಸ್ಕಾರ, ಇದು ನನ್ನ ಅಭ್ಯಾಸ, ನನ್ನ ಪ್ರವರ್ತನೆ, ಈ ನನ್ನದು ಎಂಬ ರಾವಣನ ಸಂಸ್ಕಾರಗಳನ್ನು ಸಮಾಪ್ತಿ ಮಾಡಿ ಹೃದಯದಲ್ಲಿ ಹೃದಯ ರಾಮನನ್ನಿಟ್ಟುಕೊಂಡು ತಂದೆಯ ಸಂಸ್ಕಾರಗಳು ಅರ್ಥಾತ್ ವಿಶ್ವಕಲ್ಯಾಣಕಾರಿ, ಶುಭ ಚಿಂತನಧಾರಿ, ಶುಭ ಭಾವನೆ, ಶುಭಕಾಮನೆಗಳನ್ನು ನನ್ನ ಸಂಸ್ಕಾರಗಳನ್ನಾಗಿಸಿ ಕೊಂಡಿರುವ ಬಾಪ್ ಸಮಾನಸ್ವರೂಪ.

11. ನಾನು ಶ್ರೀಮತ ಎಂಬ ಲಗಾಮನ್ನು ಬಿಗಿಯಾಗಿಟ್ಟುಕೊಂಡು ನನ್ನ ಮನಸ್ಸು, ಬುದ್ಧಿಯನ್ನು ಸ್ಥಿರವಾಗಿ ಇಟ್ಟುಕೊಂಡು ಲಕ್ಷ್ಯವನ್ನು ತಲುಪಿದ್ದೇನೆ.

12. ನಾನು ನಡೆದಾಡುವುದು, ತಿನ್ನುವುದು, ಪಾನಿಯ ಸೇವಿಸುವುದು, ಕೇಳಿಸಿಕೊಳ್ಳುವುದು, ಹೇಳುವುದು ಪ್ರತಿಯೊಂದು ಕರ್ಮದ ಶ್ರೀಮತದ ಮೇಲೆ ನಡೆಯುವ ಆಜ್ಞಾಕಾರಿ.

13. ನನ್ನ ಮನಸ್ಸು ಎಂಬ ಮಂತ್ರಿಯೊಂದಿಗೆ ಪ್ರತಿದಿನ ದರ್ಬಾರನ್ನು (ಏನು ಮಾಡಿರುವೆ, ಎಲ್ಲಿಯೂ ಮೋಸ ಮಾಡಲಿಲ್ಲ ತಾನೇ) ಇಟ್ಟುಕೊಳ್ಳುವ ಸ್ವರಾಜ್ಯಾಧಿಕಾರಿಯಾಗಿದ್ದೇನೆ.

14. ನಾನು ತಪಸ್ಸಿನಿಂದ ರಾವಣನ ವಸ್ತುಗಳನ್ನು (ಸಂಸ್ಕಾರಗಳನ್ನು) ತಪಸ್ಸು ಎಂಬ ಅಗ್ನಿಯಲ್ಲಿ ಹಾಕಿ ಸಮಾಪ್ತಿ ಮಾಡಿದ್ದೇನೆ.

15. ನಾನು ನನ್ನೊಳಗಿನ ನ್ಯೂನತೆಗಳನ್ನು ಪರಿಶೀಲಿಸಿಕೊಂಡು ಪರಿವರ್ತನೆ ಮಾಡಿಕೊಂಡಿದ್ದೇನೆ.